Mr. Speaker.— The Bill is introduced.

BILLS FOR CONSIDERATION AND PASSING

1. The Karnataka Inams Abolition Laws (Amendment) Bill, 1984.

Sri A. Lakshmisagar (Minister for Law and Parly. Affairs and Housing).— Sir, I beg to move : " That the Karnataka Inams Abolition Laws (Amendment) Bill, 1984 be taken into consideration ".

The Question was Proposed

Sri A. Lakshmisagar — This is intended to extend time till March 1984 for persons who are in occupation of the land. There was an amendment for extending time But in the meanwhile, there have been representations for extension of time. This is intended to meet such representations. This is well for the purpose of protecting the interests of the tenants.

ಶ್ರೀ ಕೆ. ಚೆನ್ನಬಸವಗೌಡ.— ಅಧ್ಯಕ್ಷರೆ, ಕರ್ನಾಟಕ ಇನಾಂ ರದ್ದಿಯಾತಿ ಕಾನೂನುಗಳ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ನಾನು ಕೆಲವು ವಿಚಾರಗಳನ್ನು ತಿಳಿಸಲಿಕ್ಕೆ ಇಷ್ಟಪಡುತ್ತೇನೆ ಇದರ ಬಗ್ಗೆ ಮೊದಲೇ ಒಂದು ಕಾನೂನು ಆಗಿದೆ, ಮತ್ತೆ ಏತಕ್ಕೆ ಆಗಬೇಕು ? ನಮ್ಮ ಬಳ್ಳಾರಿಯಲ್ಲಿ ಇಲ್ಲ. ಈಗ ಬಳ್ಳಾರಿ, ಕೊಳ್ಳೇಗಾಲ, ಸೌತ್ ಕೆನರಾ.....

ಶ್ರೀ ಎ. ಲಕ್ಷ್ಮೀಸಾಗರ್.— ಅದಕ್ಕೆ ಬೇರೆ ಕಾನೂನು ತರುತ್ತಿದ್ದೇವೆ. ಅವರ ಪ್ರಾಬ್ಲಮ್ ನನಗೆ ಗೊತ್ತಿದೆ. ಈ ಅಧಿವೇಶನವಲ್ಲಿಯೇ ನಾನು ತರುತ್ತೇನೆ.

ಅಧ್ಯಕ್ಷರು.— ಅದು ಮೊದಲು ಮದ್ರಾಸ್ ಆಕ್ಟ್ ಪ್ರಕಾರ ಇತ್ತು.

ಶ್ರೀ ಎ. ಲಕ್ಷ್ಮೀಸಾಗರ್.— ಅದಕ್ಕೆ ಬೇರೆ ಕಾನೂನು ತರುತ್ತಿದ್ದೇವೆ.

ಶ್ರೀ ಕೆ. ಚೆನ್ನಬಸವಗೌಡ.— ಅಧ್ಯಕ್ಷರೆ,.....

ಅಧ್ಯಕ್ಷರು.—ಮಾನ್ಯ ಮುಖ್ಯಮಂತ್ರಿಗಳು, ಮೊದಲು ಮದ್ರಾಸ್ ಆಕ್ಟ್‌ನಿಂದ ಬಂದ ಸಮಸ್ಯೆ ಗೊತ್ತಿದೆ, ಪೂರ್ಣ ಪ್ರಮಾಣದ ಬಿಲ್ಲು ಇದೇ ಅಧಿವೇಶನದಲ್ಲಿ ತರುತ್ತೇವೆಂದು ಹೇಳುತ್ತಿದ್ದಾರೆ. ದಯವಮಾಡಿ ಮಾನ್ಯ ಸದಸ್ಯರು ಕುಳಿತುಕೊಳ್ಳಬೇಕು.

Mr. Speaker.— I will put the Consideration Motion to the vote of the House. The question is : " That the Karnataka Inams Abolition Laws (Amendment) Bill 1984 be taken into consideration".

The motion was adopted.

ಶ್ರೀ ಕೆ. ಹೆಚ್. ರಂಗನಾಥ್.— ಅಧ್ಯಕ್ಷರೆ, ಇದನ್ನು ಸ್ವಲ್ಪ ತಾವು ನೋಡಿದಿರೋ ಇಲ್ಲವೋ ಗೊತ್ತಿಲ್ಲ. ನಾವು ನೋಡದಿದ್ದರೂ ತಾವು ನೋಡಬೇಕಾಗುತ್ತದೆ. ಇದರಲ್ಲಿ ಪ್ರಶ್ನೆ ಏನಿದೆ. 1981ರ ಜೂನ್‌ಗೆ ಬಿಲ್ಲು ಆಖೈರು ಆಗಿದೆ.

ಅಧ್ಯಕ್ಷರು.— ತಾವು ಅಮೆಂಡ್‌ಮೆಂಟ್ ಕಳುಹಿಸಿಲ್ಲ.

Sri K. H Ranganath.— I know that I have not sent any amendment. ಆದರೂ ಕೂಡ ಮಂತ್ರಿಗಳು ಇದರ ಬಗ್ಗೆ ಪುನರ್‌ವಿಮರ್ಶೆ ಮಾಡುವುದು ಯೋಗ್ಯ ಎಂದು ನನ್ನ ಅಭಿಪ್ರಾಯ. ಮೊದಲನೆಯ ಕ್ಲಾಸ್ ತೆಗೆದುಕೊಂಡರೆ, ನಾನು ಇದರ ಬಗ್ಗೆ ಅಮೆಂಡ್‌ಮೆಂಟ್ ಕಳುಹಿಸಲಿಲ್ಲ, ನಾನು ಎಜುಕೇಷನ್ ಬಿಲ್ಲಿಗೆ ಮಾತ್ರ ಅಮೆಂಡ್‌ಮೆಂಟ್ ಕಳುಹಿಸಿದ್ದೇನೆ. 1981ನೇ ಜೂನ್‌ಗೆ ಆಖೈರಾದಂಥ ಮೂರು ಬಿಲ್ಲುಗಳು ಇವೆ. ಅದರಲ್ಲಿ ಇನಾಂ ಅಬಾಲಿಷನ್ ಸಂಡೂರು ಒಂದು ಇದೆ. ಈ ಎಲ್ಲಾ ಬಿಲ್ಲುಗಳು 1981ರ ಜೂನ್ 30ಕ್ಕೆ ಆಖೈರಾಗುತ್ತದೆ ಮಾನ್ಯ ಕಂದಾಯ ಮಂತ್ರಿಗಳು ಇದ್ದಾರೆ. ಅರ್ಜ್ ಹಾಕದೇ ಹೋದರೆ Absolutely they vest in Government ಎಂದು ಹೇಳುತ್ತಾರೆ. ಸರ್ಕಾರಕ್ಕೆ ಭೂಮಿ ಸೇರಿದ ಮೇಲೆ ತಾವು ವಿಲೇವಾರಿ ಮಾಡತಕ್ಕ ಅಧಿಕಾರ ಬರುತ್ತದೆ. ಅವಸರದಲ್ಲಿ ಮಾಡುವುದರಿಂದ, ಈ ರೀತಿಯಾಗುತ್ತದೆಂದು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮಂತ್ರಿಗಳು 1981ರ ಜೂನ್‌ನ ನಂತರ ಅಂದರೆ 1984ರಲ್ಲಿ ಈ ಒಂದು

ತಿದ್ದುಪಡಿಯನ್ನು ತಂದಿದ್ದಾರೆ. ಇದೂ ಕೂಡ ಬರುವ ಮಾರ್ಚ್ 31ಕ್ಕೆ ಮುಕ್ತಾಯವಾಗುತ್ತದೆ. ತಾವು ಮಾರ್ಚ್‌ವರೆಗೆ ಮಾತ್ರ ಅವಕಾಶವನ್ನು ಕೊಡುತ್ತಿದ್ದೀರಿ. ಆದರೆ ಇದು ಸರಿಯೆ ? ಇದನ್ನು ತಾವು ವಿಚಾರ ಮಾಡಬೇಕು, ಈಗ ಇದನ್ನು ತಿದ್ದುಪಡಿ ಮಾಡುವುದು ಬೇಡ ಎಂದು ಹೇಳುವುದಾದರೆ ಇದರಿಂದ ಗೇಣಿದಾರರಿಗೆ ಬಹಳ ತೊಂದರೆಯಾಗುತ್ತದೆ. ಸಣ್ಣ ಸಣ್ಣ ಹಿಡಿವಳಿದಾರರಿಗೆ ತೊಂದರೆಯಾಯಿತು ಎಂದು ಈಗ ಈ ತಿದ್ದುಪಡಿಯನ್ನು ತಂದಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ. ಆದರೆ ಇಲ್ಲಿನ ಪ್ರಶ್ನೆ ಏನೆಂದರೆ ಟೈಂ ಎಕ್ಸ್‌ಪೈರಿ 1981ರ ಜೂನ್ 30ಕ್ಕೆ ಮುಗಿದುಹೋಯಿತು. ಸರ್ಕಾರದ ವಶಕ್ಕೆ ಭೂಮಿ ಬಂದ ಮೇಲೆ ಮತ್ತೆ ಅವನು ಏತಕ್ಕೆ ಆ ಭೂಮಿಯನ್ನು ಉಳುತ್ತಾನೆ ? ಇದು ಸರ್ಕಾರದ ಜಮೀನು. ಇದು ತಮ್ಮ ವಶದಲ್ಲಿರುವುದರಿಂದ ಯಾರಿಗೆ ಈಗ ಉಳುವುದಕ್ಕೆ ಭೂಮಿ ಇಲ್ಲ ಅಂಥವರಿಗೆ ಇದನ್ನು ಹಂಚಬೇಕು. ಪರಿಸ್ಥಿತಿ ಈ ರೀತಿ ಇರುವಾಗ ತಾವು ಯಾವ ರೀತಿ ಇದನ್ನು ರಿವೈವ್ ಮಾಡುತ್ತೀರಿ ಇದು ಯಾವ ರೀತಿ ಊರ್ಜಿತವಾಗುತ್ತದೆ ? ಇಲ್ಲಿ ಮಾನ್ಯ ಕಾಯಿದೆ ಸಚಿವರು ಮತ್ತು ಮಾನ್ಯ ಕಂದಾಯ ಸಚಿವರೂ ಇರುವುದರಿಂದ ಇದನ್ನು ಪುನರ್ ಪರಿಶೀಲಿಸಬೇಕು.

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

In Mysore Act 18 of 1955 Determination of claims for registration of occupancy and continuation of tenency :—

Sub-Clause (2) (b) read thus : " Where no application is made within the period specified in clause (a), the right of any person to be registered as an occupant shall stand extinguished and the land shall vest in the State absolutely, such land shall be disposed of in accordance with rules relating to grant of lands ". ಈ ಪರಿಸ್ಥಿತಿಗೆ ನಾವು ಬಂದಿರುವಾಗ 81ರ ಜೂನ್ 30 ರಿಂದ ಈ ಪರಿಸ್ಥಿತಿ ಉದ್ಭವವಾಗಿದೆ ನಾವು ಇವತ್ತು 84ನೇ ಇಸವಿಯಲ್ಲಿ ಒಂದು ಆರ್ಡಿನೆನ್ಸ್‌ನ್ನು ತಂದು ನಾಳೆ ಮಾರ್ಚ್ 31ರ ವರೆಗೆ ಜೀವದಾನವನ್ನು ಕೊಡುವುದು ಯಾವ ಕಾನೂನು ಪ್ರಕಾರ ಬರುತ್ತದೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಇವತ್ತು ನಾನು ಇದನ್ನು ಪ್ರಸ್ತಾಪ ಮಾಡಬೇಕಾಗಿತ್ತು. ಆದರೆ ಅದಕ್ಕೆ ಅವಕಾಶ ಸಿಕ್ಕಲಿಲ್ಲ. ಆದರೂ ಈ ಬಿಲ್ಲನ್ನು ಕ್ಲಾಸ್ ಬೈ ಕ್ಲಾಸ್ ಪಾಸ್ ಮಾಡುವುದಕ್ಕೆ ಮುಂಚಿತವಾಗಿಯೇ ನನ್ನ ಅಭಿಪ್ರಾಯವನ್ನು ಇಲ್ಲಿ ಮಂಡಿಸಿದ್ದೇನೆ. ಇದು ಬಹಳ ಮೂಲಭೂತವಾದ ಪ್ರಶ್ನೆ. Now he is no more a tenant. The land absolutely vests in the Government. The right has extinguished. ಇವತ್ತು ಪೂರ್ಣ ಭೂಮಿ ಸರ್ಕಾರದ ವಶಕ್ಕೆ ಬಂದಿದೆ. ಜಮೀನು ಇಲ್ಲದವರಿಗೆ ಇದನ್ನು ಹಂಚಬೇಕು. ಅದು ಬಿಟ್ಟು ಮತ್ತೆ ಈಗ ನೀನು ಅರ್ಜಿ ಹಾಕು, ಇದನ್ನು ನಿನಗೇ ಹಂಚುತ್ತೇನೆ ಎಂದು ಹೇಳುವುದು ಸರಿಯಾದ ಕ್ರಮವಲ್ಲ. ಇದು ಸಂಡೂರಿಗೆ ಸೇರಿರಬಹುದು, ರಿಲಿಜಿಯಸ್ ಅಂಡ್ ಚಾರಿಟಬಲ್ ಇನಾಂಸ್‌ಗೆ ಸೇರಿರಬಹುದು ಅಥವಾ ಬೇರೆಯದಕ್ಕೆ ಸೇರಿರಬಹುದು. ಇಲ್ಲಿ ಒಂದು ಮಾತನ್ನು ಹೇಳುವುದಾದರೆ ನಾನು ಇದರ ಬಗ್ಗೆ ಅಮೆಂಡ್‌ಮೆಂಟನ್ನು ಕೊಟ್ಟಿಲ್ಲ ಆದರೂ ಅಲ್ಲಿಂದ ಅರ್ಜಿಗಳು ಬಂದದ್ದರಿಂದ ಇದನ್ನು ನಾವು ತರಬೇಕಾಯಿತು ಎಂದು ಹೇಳಿದ್ದೀರಿ. In your explanatory note you have stated that the above Acts were amended by Karnataka Act No. 23 of 1981 and time was extended upto 30th June 1981. So, after June 1981, all the rights that they had have extinguished and their right to claim the land as occupants does not survive at all and the land shall absolutely vest with the Govt. and they could only be guided by the Land Grant Rules and no other Acts and Rules. ಈ ಒಂದು ಪರಿಸ್ಥಿತಿ ಇರುವುದರಿಂದ ಮಾನ್ಯ ಮಂತ್ರಿಗಳು ಇದಕ್ಕೆ ಸಮಜಾಯಿಷಿ ಹೇಳಬೇಕು. ಇಲ್ಲಿನ ಮೂಲಭೂತ ಪ್ರಶ್ನೆ ಏನೆಂದರೆ ಇಂಥ ಪರಿಸ್ಥಿತಿಯಲ್ಲಿ ಈ ಸಭೆಯಲ್ಲಿ ಈ ಕಾನೂನಿಗೆ ಜೀವ ಕೊಡುವ ಶಕ್ತಿ ಇದೆಯೇ ? ಇದನ್ನು ನಾವು ಮಾಡಬಹುದೆ ? ಎಂಬುದು ನನ್ನ ದೃಷ್ಟಿಯಲ್ಲಿ ಇದು ತಪ್ಪಾಗುತ್ತದೆ. ಈ ಜಮೀನನ್ನು ಯಾರಿಗೆ ಜಮೀನು ಇಲ್ಲ ಅಂಥವರಿಗೆ ಹಂಚಬೇಕು. ಇದಕ್ಕೆ ಜೀವ ಕೊಡುವ ಅಧಿಕಾರ ನಮಗೆ ಇಲ್ಲದಿರುವುದರಿಂದ ಇದನ್ನು ಹೊಸದಾಗಿ ಬೇರೆ ರೂಪದಲ್ಲಿ ಸಭೆಯ ಮುಂದೆ ತರಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರು ದುರ್ಗ).—ಮಾನ್ಯ ಉಪಾಧ್ಯಕ್ಷರೆ, ಈಗ ಸಭೆಯ ಮುಂದಿರತಕ್ಕ ವಿಚಾರ ಮಾನ್ಯ ಸದಸ್ಯರಾದ ರಂಗನಾಥ್‌ರವರು ಹೇಳಿದಂತೆ ಕಾನೂನಿಗೆ ವಿರುದ್ಧವಾಗುತ್ತದೆ ಅಷ್ಟು ಮಾತ್ರವಲ್ಲ ಅನಂತರ ಅನೇಕ ವ್ಯಾಜ್ಯಗಳು ಬರುವುದಕ್ಕೆ ಕಾರಣವಾಗುತ್ತದೆ ಎಂಬುದನ್ನೂ ತಾವು ತಿಳಿದುಕೊಳ್ಳಬೇಕು. ಈ ಕಾನೂನು 81ರ ಜೂನ್ 30ಕ್ಕೆ ಅಂತ್ಯವಾಗಿದೆ. ಆದರೂ ಇದನ್ನು

ಹಿಂದಿನ ಮೂರು ವರ್ಷಗಳಿಗೆ ಅನ್ವಯವಾಗುವಂತೆ ಕಾನೂನು ತರುವುದಾದರೆ ಇದರಿಂದ ಮುಂದೆ ಬಹಳ ವ್ಯಾಜ್ಯಗಳಾಗುತ್ತವೆ. ತಾವು ತಂದಿರುವಂಥ ರೀತಿಯಲ್ಲಿ ಸ್ಪಷ್ಟವಾಗಿ ಕಾನೂನು ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಇದನ್ನು ಪುನರ್ ಪರಿಶೀಲಿಸಿ ಇದಕ್ಕೆ ಯಾವ ರೀತಿಯ ಪರಿಹಾರವನ್ನು ತರಬೇಕೆಂದು ಯೋಚನೆ ಮಾಡಿ ನಂತರ ತರುವುದು ಸೂಕ್ತವೆಂದು ಹೇಳಬಯಸುತ್ತೇನೆ.

ಶ್ರೀ ಎಂ. ಎಸ್. ನಾರಾಯಣರಾವ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ರಂಗನಾಥ್‌ರವರೂ ಮತ್ತು ಮಾನ್ಯ ಹುಚ್ಚಮಾಸ್ತಿಗೌಡರು ಮಾತನಾಡಿ 81ನೇ ಇಸವಿ ಜೂನ್‌ಗೇ ಮುಗಿದು ಹೋದ ಈ ಕಾಯಿದೆಯನ್ನು 3 ವರ್ಷ ಆದಮೇಲೆ ಮತ್ತೆ ಇದಕ್ಕೆ ಜೀವದಾನ ಮಾಡುವುದು ಸರಿ ಹೋಗುವುದಿಲ್ಲ. ಇದರಿಂದ ಮುಂದೆ ವ್ಯಾಜ್ಯಗಳಾಗುತ್ತವೆ, ಎಂದು ಹೇಳಿದರು. ಇಲ್ಲಿ ಅಮೆಂಡ್‌ಮೆಂಟ್ ತಂದಿರುವುದು (1) in sub-clause (i) for the words and figures. .....

ಶ್ರೀ ಕೆ. ಎಚ್. ರಂಗನಾಥ್.—ಪೇಜ್ 5ರಲ್ಲಿ 1955ರ ಆಕ್ಟ್‌ನ ಎಕ್ಸ್‌ಟ್ರಾಕ್ಟ್‌ನ್ನು ಕೊಟ್ಟಿದ್ದಾರೆ. ಇದರಲ್ಲಿ ಸೆಕ್ಷನ್ 9, ಸಬ್ ಸೆಕ್ಷನ್ (ಬಿ) ನಲ್ಲಿ ಏನು ಕೊಟ್ಟಿದ್ದಾರೆ ಎಂಬುದನ್ನು ತಾವು ದಯವಿಟ್ಟು ನೋಡಿ. ನಾವು ಈಗ ಆ ಒಂದು ಸ್ಟೇಜ್‌ನಲ್ಲಿ ಇದ್ದೇವೆ. ಈ ಕಾಯಿದೆ ಜೀವದಿಂದ ಇದ್ದಿದ್ದರೆ ಇದನ್ನು ನಾವು ಮುಂದುವರಿಸುವುದಕ್ಕೆ ಸಾಧ್ಯವಾಗುತ್ತಿತ್ತು.

ಶ್ರೀ ಎಂ. ಎಸ್. ನಾರಾಯಣರಾವ್.—ಈ ಅಮೆಂಡ್‌ಮೆಂಟನ್ನು ತಂದಿರುವುದು 31st shall be and shall always deemed to have been substituted from 1955. 1955ನೇ ಇಸವಿಯಿಂದ ಏನು ಆಕ್ಟ್ ಬಂತು ಆ ಆಕ್ಟ್‌ನಿಂದಲೇ ಇದು ಸಬ್‌ಸ್ಟಿಟ್ಯೂಟ್ ಆಗುತ್ತದೆ. ಆದ್ದರಿಂದ ಈ ಸದನಕ್ಕೆ ಅಧಿಕಾರವಿದೆಯೆಂದು ಹೇಳಬಯಸುತ್ತೇನೆ. ಒಂದು ಅನಾಲಗಸ್ ಕೇಸ್ಸನ್ ಇತ್ತು. ರೆಂಟ್ ಕಂಟ್ರೋಲ್ ಆಕ್ಟ್‌ನ್ನು ಪ್ರೊಮಲ್‌ಗೇಟ್ ಮಾಡಿದಾಗ ಡೇಟ್ ಎಕ್ಸ್‌ಪೈರ್ ಆಗಿ ಹೋಗಿತ್ತು ಎರಡನೇ ಆರ್ಡಿನೆನ್ಸ್‌ನ್ನು ಪ್ರೊಮಲ್‌ಗೇಟ್ ಮಾಡಿ ಹಿಂದಿನ ಆರ್ಡಿನೆನ್ಸ್‌ನ್ನು ವ್ಯಾಲಿಡೇಟ್ ಮಾಡಿದರು. ಸರ್ಕಾರಕ್ಕೆ ಹಕ್ಕು ಇಲ್ಲವೆಂದು ಕೆಲವರು ಹೈಕೋರ್ಟಿಗೆ ರಿಟ್ ಹಾಕಿದರು. ಹೈಕೋರ್ಟಿನವರು ಹಕ್ಕು ಇದೆಯೆಂದು ಹೇಳಿದ್ದಾರೆ. ಆದ್ದರಿಂದ 81ರಲ್ಲಿ ಟೈಂ ಮುಗಿದಿದ್ದರೂ ಕೂಡ ಒಂದು ಅಮೆಂಡ್‌ಮೆಂಟ್ ಮುಖಾಂತರ ಅದನ್ನು ತಿದ್ದುಪಡಿ ಮಾಡಲಾಗಿದೆ ಆ ದೃಷ್ಟಿಯಿಂದ ಇದನ್ನು ಮಾಡುವುದಾದರೆ ಇದರಲ್ಲಿ ಏನೂ ತಪ್ಪಾಗುವುದಿಲ್ಲ.

ಮಾನ್ಯ ಸದಸ್ಯರಾದ ಹುಚ್ಚಮಾಸ್ತಿಗೌಡರು ಹೇಳಿದರು. ಇದರಿಂದ ಮುಂದೆ ಸಾಕಷ್ಟು ವ್ಯಾಜ್ಯಗಳು ಬರುತ್ತವೆ ಎಂದು.

ಉಪಾಧ್ಯಕ್ಷರು.—ಆ ಜಮೀನು ಡಿಸ್‌ಪೋಸ್ ಆಗಿದ್ದರೆ ಏನು ಮಾಡುತ್ತೀರಿ ? ಎಂಬುದು ಮಾನ್ಯ ಸದಸ್ಯರ ಪ್ರಶ್ನೆ.

ಶ್ರೀ ಎಂ. ಎಸ್. ನಾರಾಯಣರಾವ್.—ಅದನ್ನು ಮಾರಿದ್ದರೆ ಯಾರು ಅದನ್ನು ಕೊಂಡುಕೊಂಡಿರುತ್ತಾರೆ ಅವರಿಗೆ ಮಾತ್ರ ಆ ಹಕ್ಕು ಬರುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊದಲು ಯಾರೋ ಒಬ್ಬ ಗೇಣಿದಾರ ಮಾಡುತ್ತಿದ್ದರೂ ಕೂಡ ಅದನ್ನು ಇನ್ನೊಬ್ಬ ಗೇಣಿದಾರನಿಗೆ ಕೊಡಬೇಕಾಗುತ್ತದೆ. ಅಂಥ ಪರಿಸ್ಥಿತಿಯಲ್ಲಿ ನೀವು ಯಾವ ಗೇಣಿದಾರನಿಗೆ ರಕ್ಷಣೆ ಕೊಡುತ್ತೀರಿ ? 81ರ ಜೂನ್ 30ರವರೆಗೆ ಯಾರು ಗೇಣಿದಾರ ಇದ್ದಾನೆ ಮತ್ತು ಅವನಿಗೇ ಕೊಡಬಹುದೆಂದು ತಾವು ಯೋಚನೆ ಮಾಡಬಹುದು ಬದಲಾವಣೆಯಾಗಿರುವುದು ಉಂಟು. ದೇವಸ್ಥಾನದ ಕೊಡುಗೆ ಜಮೀನು ಬದಲಾವಣೆಯಾಗುತ್ತಾ ಹೋಗುತ್ತಿರುತ್ತದೆ ಗೇಣಿದಾರನ ಕೈಬದಲಾವಣೆಯಾಗತ್ತಾ ಇರತಕ್ಕಂಥ ಪರಿಸ್ಥಿತಿಯಲ್ಲಿ ಯಾರಿಗೆ ರಕ್ಷಣೆಯನ್ನು ಕೊಡುವುದು. ಇಂಥದ್ದಕ್ಕೆ ಅನೇಕ ವಿಧವಾದ ಅಡಚಣೆ ಇರುತ್ತದೆ. ಸ್ಥಳೀಯ ವಿದ್ಯಮಾನಗಳನ್ನು ನೋಡಿದಾಗ ಗೊತ್ತಾಗುತ್ತದೆ ಇದರಿಂದ ವ್ಯಾಜ್ಯಕ್ಕೆ ಕಾರಣವಾಗುತ್ತದೆ. ಯಾವುದೇ ಗೇಣಿದಾರನಿಗೆ ಬದಲಾವಣೆಯಾಗಿಲ್ಲವೆಂದು, ರೆವಿನ್ಯೂ ಸರ್ಕಾರದ ವಶಕ್ಕೆ ಬಂದಿದೆ ಎಂದು ತಿಳಿದು ಅದನ್ನು ಇನ್ನೊಬ್ಬರಿಗೆ ಮಂಜೂರು ಮಾಡಿದ ಪರಿಸ್ಥಿತಿ ಇರುತ್ತದೆ. ನಾವು ಈ ಮಸೂದೆಗೇನು ವಿರುದ್ಧವಾಗಿಲ್ಲ. ಹೀಗೆ ವ್ಯಾಜ್ಯ ಇರತಕ್ಕಂಥ ಜಮೀನನ್ನು ಬಗೆಹರಿಸುವುದು ಹೇಗೆ ಎಂದು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಲಾ ಪ್ರಕಾರ ಏನೂ ತೊಂದರೆ ಇಲ್ಲ. ಗೇಣಿ ಮುಂದುವರಿಯುವುದಕ್ಕೆ ಕೋರ್ಟಿಗೆ ಹೋಗುತ್ತಾನೆ. ಇನಾಮ್ ಅಬಾಲಿಷನ್ ಆಕ್ಟ್ ಪ್ರಕಾರ ಈ ರೀತಿ ಕೇಸ್‌ಗಳಿಗೆ ಹೈಕೋರ್ಟ್ ಜಡ್ಜ್‌ಮೆಂಟ್ ಕೂಡ ಕೊಟ್ಟಿದೆ. ಯಾರು ಯಾರು ಗೇಣಿ ಮಾಡುತ್ತಾರೆ, ಅವರು ಅಪ್ಲಿಕೇಶನ್ ಹಾಕಿಕೊಂಡಿರುತ್ತಾರೆ. ಅಂಥ ಅರ್ಜಿಗಳನ್ನು ಮುಗಿಸಲೇಬೇಕೆಂದು ಕೂಡಾ ಇದ್ದಾರೆ. ಆದ್ದರಿಂದ ಈಗಿರತಕ್ಕಂಥ ಮಸೂದೆಯಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ಈ ತಿದ್ದುಪಡಿ ಮಸೂದೆ ಸರಿಯಾದುದಾಗಿದೆ. ಆದ್ದರಿಂದ ಇದನ್ನು ಪಾಸ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.— ಗೇಣಿದಾರನಿಗೆ ಭೂಮಿಯನ್ನು ಕೊಡುವುದಕ್ಕೆ ನಮ್ಮದೇನೂ ಆಭ್ಯಂತರವಿಲ್ಲ. ಆದರಲ್ಲೂ ಕೂಡ ಹಳೆಯ ಮೈಸೂರಿನಲ್ಲಿ ನಾನಾ ರೀತಿಯ ಇನಾಂತಿ ಇರುತ್ತದೆ.

ಎಕ್ಸ್‌ಪೈರ್ ಗುತ್ತಿಗೆ ಎಂದು ಇರುತ್ತದೆ. ಇದು ವರ್ಷ ವರ್ಷವೂ ಗುತ್ತಿಗೆದಾರರಿಗೆ ಗುತ್ತಿಗೆಯನ್ನು ಕೊಟ್ಟುಕೊಂಡು ಹೋಗುವುದು. ಪಂಚಸಾಲ್ ಗುತ್ತಿಗೆ ಎಂದು ಇರುತ್ತದೆ. ಐದು ವರ್ಷಗಳಿಗೆ ಒಮ್ಮೆ ಮತ್ತೆ ಅವನೇ ತೆಗೆದುಕೊಳ್ಳುವುದು. ಬೇರೆ ಯಾರು ಗೇಣಿದಾರರೂ ಇರುವುದಿಲ್ಲ. ಆಂಥ ಗೇಣಿದಾರನು ಅರ್ಜಿ ಹಾಕಿಕೊಂಡು ಖಾಯಂ ಮಾಡಿಕೊಳ್ಳುವುದಕ್ಕೆ ತಿಳಿಯದೇ ಇರುವುದರಿಂದ ಈ ರೀತಿ ಟೈಮ್ ಎಕ್ಸ್‌ಟೆಂಡ್ ಮಾಡಿಕೊಂಡು ಹೋಗತಕ್ಕಂಥ ಪರಿಸ್ಥಿತಿ ಇದೆ. 31ನೇ ಜೂನ್‌ವರೆಗೆ ಎಕ್ಸ್‌ಟೆಂಡ್ ಮಾಡಿ, ತದನಂತರ ಮುಂದುವರಿಸುವುದಕ್ಕೆ ಹೋಗಲಿಲ್ಲ. ಮುಂದುವರಿಸುವುದಕ್ಕೆ ಹೋಗದೆ ಇದ್ದರೂ ಕೂಡ ಸರ್ಕಾರದ ವಶಕ್ಕೆ ಬಂದಿದೆ ಎಂದು ಸರ್ಕಾರಿ ಅಧಿಕಾರಿಗಳು ನೋಟೀಸ್ ಕೊಟ್ಟು ಮೂರು ವರ್ಷ ಆದ ನಂತರ ಟೈಮ್ ಎಕ್ಸ್‌ಟೆಂಡ್ ಮಾಡಿಲ್ಲವೆಂದು ಹೇಳಿ ಬರೆದುಕೊಳ್ಳುತ್ತಾರೆ. ಈ ಮೆಧ್ಯೆ ಬೇರೆ ಬೇರೆ ರೀತಿಯಲ್ಲಿ ರೂಪಾಂತರ ಹೊಂದಿರುತ್ತದೆ. ಇಂಥ ಪರಿಸ್ಥಿತಿ ಇರುವಾಗ ಇದನ್ನು ವಿಚಾರ ಮಾಡಬೇಕಾಗುತ್ತದೆ. ಇದೆಲ್ಲ ಪರಿಶೀಲನೆ ಮಾಡದೆ ಯಾರಿಗೆ ಭೂಮಿಯನ್ನು ಕೊಡುವುದು ಎನ್ನುವುದು ಮೂಲ ಅಭಿಪ್ರಾಯವಾಗಿರುತ್ತದೆ. ನಾನು ಈ ಮಸೂದೆ ತಿದ್ದುಪಡಿಯ ವಿರುದ್ಧ ಮಾತನಾಡುತ್ತಿಲ್ಲ. ಆದರೆ ಕಾನೂನು ರೀತ್ಯ ತಪ್ಪಾಗತಕ್ಕಂಥದ್ದು ಇರುತ್ತದೆ. ಮೂರು ವರ್ಷಗಳಾದ ಮೇಲೆ ತಾವು ವಸೂಲು ಮಾಡಲಿಕ್ಕೆ ಬರುವುದಿಲ್ಲ ಆದ್ದರಿಂದ ತಾವು ಏನಾದರೂ ಬೇರೆ ರೀತಿಯಲ್ಲಿ ಪರಿಶೀಲನೆ ಮಾಡಬೇಕು. ಆಂಥ ಭೂಮಿ ಏನಾದರೂ ಇದ್ದರೆ ಅದನ್ನು ಲೀಸ್ ಏನಾದರೂ ಕೊಟ್ಟಿದ್ದರೆ ಹೊಸ ಕಾನೂನು ಮಾಡತಕ್ಕಂಥದ್ದು ಸ್ಪಷ್ಟವಾಗಿ ಇರುತ್ತದೆ. ಇವರಲ್ಲಿ ಏನು ಹೇಳಿದ್ದಾರೆಂದರೆ "This is deemed to have been extended" ಎಂದು ಹೇಳಿದ್ದಾರೆ. ಇದು ಸರಿಯಾದದ್ದಾಗಿ ಆಗಲಾರದು. ಆದ್ದರಿಂದ ಮಾನ್ಯ ಕಾಯಿದೆ ಮಂತ್ರಿಗಳು ಇದನ್ನು ವಿಶ್ಲೇಷಣೆ ಮಾಡತಕ್ಕಂಥದ್ದು ಸೂಕ್ತವೆಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ರಂಗನಾಥ್‌ರವರು ಅವರು ಹೇಳತಕ್ಕಂಥವನ್ನೆಲ್ಲವನ್ನು ಹೇಳಿ ಪೂರೈಸಿದ್ದಾರೆಂದು ಭಾವಿಸುತ್ತೇನೆ. ಅವರು ಬಹಳ ಸರಳವಾಗಿ ಬಹಳ ವಿಚಾರ ಪೂರಿತವಾಗಿ ಈ ಮಸೂದೆಯ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಆದರೆ ಇದರಲ್ಲಿ ಮುಖ್ಯವಾಗಿ ಇರುವುದು ಏನೆಂದರೆ ಈಗಾಗಲೇ 1981ನೇ ಇಸವಿಯಲ್ಲಿ ಯಾರು ಅರ್ಜಿ ಹಾಕಿದ್ದಾರೆ "Eligible for Registration of Occupancy rights" ಅಂತಹವರು ಅರ್ಜಿ ಹಾಕಿಕೊಳ್ಳಬಹುದು. ಅವರ ವಾದವೇನೆಂದರೆ ಯಾವಾಗ ವಿಸ್ತರಣೆ ಮಾಡಲಿಲ್ಲವೋ ಆಗ ಕಾನೂನು ಪ್ರಕಾರ ಸರ್ಕಾರಕ್ಕೆ ಅದೆಲ್ಲ ಬಂದಿದೆ ಎಂದು ಅವರ ವಾದ. ಪೂರ್ವಾನ್ವಯವಾಗಿ ಜಾರಿಗೆ ಕೊಡುವುದಕ್ಕೆ ಆಗುವುದಿಲ್ಲ. ಆದರೆ ಕಾನೂನು ಪ್ರಕಾರ ಪೂರ್ವಾನ್ವಯವಾಗಿ ಕಾನೂನನ್ನು ವಿಸ್ತರಣೆ ಮಾಡತಕ್ಕಂಥ ಅಧಿಕಾರ ಶಾಸನಸಭೆಗೆ ಇದೆ. ನಮ್ಮ ವಾದ ಏನು ರಿಟ್ರಾಸ್‌ಪೆಕ್ಟೀವ್ ಎಫೆಕ್ಟ್ ಕೊಡುವುದಕ್ಕೆ ಸಭೆಗೆ ಅಧಿಕಾರ ಇದೆ ಎಂದು. ಅವರ ತಕರಾರು ಏನು ಇದೆ, ಗುತ್ತಿಗೆ ಕಾನೂನು ಪ್ರಕಾರ ಏನು ಆಗಬಹುದೋ ಅದು ಆಗುತ್ತದೆಂದು ಕಾನೂನು ಪ್ರಕಾರ ಅರ್ಜಿ ಹಾಕಿದ್ದರೆ ಟೈಮ್ ಎಕ್ಸ್‌ಟೆಂಡ್ ಮಾಡಬೇಕಾಗುತ್ತದೆ. ಆಯಾ ಪ್ರದೇಶದ ಜನರು ಮನವಿ ಕೊಟ್ಟಿರುವ ಪ್ರಕಾರ ಕೆಲವೊಂದಕ್ಕೆ ಮಾಡತಕ್ಕಂಥದ್ದು ಇದೆ. ಮೊದಲನೇ ಸಲ 1981ನೇ ಇಸವಿಯಲ್ಲಿ ಎಕ್ಸ್‌ಟೆಂಡ್ ಮಾಡಿದ್ದಾಗ ಮಾನ್ಯ ರಂಗನಾಥ್‌ರವರೇ ಈ ಪೀಠವನ್ನು ಅಲಂಕರಿಸಿದ್ದರು.

ಶ್ರೀ ಕೆ.ಎಚ್. ರಂಗನಾಥ್.— ಎಕ್ಸ್‌ಪೈರ್ ಆಗಿ ಮೂರು ವರ್ಷಗಳಾಗಿತ್ತೋ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ಇಷ್ಟು ಕೆಳಮಟ್ಟದ ವಾದ ಮಾಡುವುದು ಬೇಡ.

ಶ್ರೀ ಕೆ.ಎಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳ ಬಗ್ಗೆ ನನಗೆ ಬಹಳ ಗೌರವವಿದೆ. ನಾನು ಬಹಳ ಗೌರವದಿಂದ ಹೇಳುತ್ತಿದ್ದೇನೆ. ನನ್ನನ್ನು ವೈಯಕ್ತಿಕವಾಗಿ ಈ ರೀತಿ ಕೆಳಮಟ್ಟದ ವಾದ ಎಂದು ಆಪಾದನೆ ಮಾಡತಕ್ಕಂಥದ್ದು ಸರಿಯಾದದಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.— ವಾದ ಮಾಡುವುದಾದರೆ ಒಂದು ಸಲ, ಎರಡು ಸಲ, ಮೂರು ಸಲ, ಯಾರೇ ಮೆಂಬರ್ಸ್ ಇರಬಹುದು, ಕೆಳಮಟ್ಟದ್ದು ಎಂದು ಏತಕ್ಕೆ ಹೇಳಿದೆ ಅಂದರೆ .....

ಶ್ರೀ ಕೆ ಎಚ್. ರಂಗನಾಥ್.— ಸ್ವಾಮಿ ಮಂತ್ರಿಗಳಿಂದ ಏನು ನಿರೀಕ್ಷಣೆ ಮಾಡುತ್ತೇವೆ? ಸಂಯಮವನ್ನು ನಿರೀಕ್ಷಣೆ ಮಾಡುತ್ತೇವೆ

ಶ್ರೀ ಎ. ಲಕ್ಷ್ಮೀಸಾಗರ್.— ಸಂಯಮವಿದೆ. ಹಿಂದೆ ಮಾನ್ಯ ರಂಗನಾಥ್‌ರವರು ಸಭಾಧ್ಯಕ್ಷರಾಗಿದ್ದಾಗ ಈ ವಿಷಯದ ಮೇಲೆ ಚರ್ಚೆ ಆಗಿತ್ತು.

Sri K H Ranganath —I take strong objection ಕೆಳಮಟ್ಟದ್ದು ಎಂದರೆ.... ಮಾನ್ಯ ರಂಗನಾಥ್‌ರವರು ಅಧ್ಯಕ್ಷರಾಗಿದ್ದರು ಎಂದರೆ ನಮ್ಮ ಬುದ್ಧಿ ಕೆಟ್ಟಿತ್ತು. ಎಂದು ಅರ್ಥವಾಗುತ್ತದೆ. ನಾನು ಅಧ್ಯಕ್ಷನಾಗಿದ್ದೆ ಎಂದು ಮಾನ್ಯ ಸಚಿವರು ಹೇಳಿದರೆ, When I raise certain points, the Hon'ble Minister must judicially meet those points. This Act has expired on 30th June 1981, Subsequently, the Govern-

ment has not come forward to extend the time limit. So, the law has come into force and it has been kept open. Of course, we have got fight to pass a law retrospectively. I agree with the Hon'ble Minister on that point. But the point is that when the law has been in operation, there have been number of changes both in the character of the tenants and in the character of the laws. When such being the case, are we right in bringing an amendment of this type? This is the fundamental point of law which has been raised. I do not want to criticise the Hon'ble Minister for law. Let him not say that because I was in the Chair, I have allowed it. Let him point out that a situation of this type was there when the time was extended when I was in the Chair, I would gladly accept my lapse. If not the Hon'ble Minister will have to apologise.

ಡಾ॥ ಹೆಚ್. ಎಲ್. ತಿಮ್ಮೇಗೌಡ.— ಮಾನ್ಯ ಮಂತ್ರಿಗಳು ಹೇಳುವ ರೀತಿ ಅವಧಿಯನ್ನು ಎಕ್ಸ್‌ಟೆಂಡ್ ಮಾಡಿದ್ದಾರೆಂದು ಹೇಳಿದರೆ ತಪ್ಪಾಗಲಾರದೆಂದು ತಿಳಿದುಕೊಂಡಿದ್ದೇವೆ ಮಾನ್ಯ ರಂಗನಾಥ್‌ರವರು ಹೇಳಿದ ಹಾಗೆ 1980ನೇ ಇಸವಿ ಜೂನ್ 30ನೇ ತಾರೀಖಿನ ಆದಮೇಲೆ ತಹಶೀಲ್ದಾರರು, ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಬೇರೆಯವರಿಗೆ ಲ್ಯಾಂಡ್ ಕೊಟ್ಟಿರುತ್ತಾರೆ. ಆದರೆ ಹಿಂದಿನ ಟೆನೆಂಟ್ ಆಗಿದ್ದವನು ಅರ್ಜಿ ಹಾಕಿದರೆ ವ್ಯಾಜ್ಯಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ವಿಶ್ಲೇಷಣೆ ಮಾಡಬೇಕು.

ಮಾನ್ಯ ಕಾನೂನು ಮಂತ್ರಿಗಳಾಗಲೀ ಅಥವಾ ಮಾನ್ಯ ಕಂದಾಯ ಮಂತ್ರಿಗಳಾಗಲೀ ಈ ತರಹ ಯಾವುದೂ ಗ್ರ್ಯಾಂಟ್ ಮಾಡಿಲ್ಲ, ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಒಂದು ಎಕರೆ ಜಮೀನನ್ನೂ ಸಹ ವಿತರಣೆ ಮಾಡಿಲ್ಲವೆಂದು ಹೇಳಿದರೆ ಇದನ್ನು ಪಾಸ್ ಮಾಡಬಹುದು. ಇಲ್ಲದಿದ್ದರೆ ನಾನಾ ರೀತಿಯ ವ್ಯಾಜ್ಯಗಳು ಹುಟ್ಟಿಕೊಳ್ಳುತ್ತವೆ. ಆಗ ಈ ತಿದ್ದುಪಡಿಯಿಂದ ಗೇಣಿದಾರರಿಗೆ ಪ್ರೋತ್ಸಾಹ ಮಾಡಿದಂತೆ ಆಗುವುದಿಲ್ಲ. ಮಾನ್ಯ ರಂಗನಾಥ್ ಅವರು ಹೇಳಿದಂತೆ ನಮ್ಮ ಹಳ್ಳಿಗಳ ಕಡೆ ಈ ದೇವಸ್ಥಾನಗಳಿಗೆ ಸೇರಿದ ಜಮೀನನ್ನು ತಹಶೀಲ್ದಾರರು ಒಂದು ವರ್ಷದ ಅವಧಿಗೆ ಇಲ್ಲವೇ 5ವರ್ಷಗಳ ಅವಧಿಗೆ ಹರಾಜು ಮಾಡುತ್ತಾರೆ ಅವಧಿ ಮುಗಿದ ನಂತರ ಯಾವ ಜಮೀನನ್ನು ಮತ್ತೆ ಹರಾಜು ಮಾಡದೆ ಸುಮ್ಮನೆ ಇಟ್ಟುಕೊಂಡಿದ್ದರೆ ಈ ತಿದ್ದುಪಡಿ ಕಾನೂನನ್ನು ಹಿಂದಿನಿಂದ ಜಾರಿಗೆ ತಂದರೂ ಸಹ ಏನೂ ತೊಂದರೆಯಾಗುವುದಿಲ್ಲ. ಆದ ರಿಂದ ಈ ಬಗ್ಗೆ ಎಲ್ಲ ಕಡೆಯಿಂದಲೂ ವಿವರ ವನ್ನು ಈ ಬಗ್ಗೆ ತರಿಸಿಕೊಳ್ಳುವುದು ಒಳ್ಳೆಯದು. ತಾ: 30-6-1981ರ ನಂತರ ಈ ಇನಾಂ ಜಮೀನುಗಳೆಲ್ಲಾ ಸರ್ಕಾರದ ವಶದಲ್ಲಿಯೇ ಇದ್ದರೆ ಈ ಕಾನೂನನ್ನು ಜಾರಿ ಮಾಡಬಹುದು. ಇಲ್ಲದಿದ್ದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಈ ಬಗ್ಗೆ ಮತ್ತೊಮ್ಮೆ ಯೋಚನೆ ಮಾಡುವುದು ಅಗತ್ಯ ವಿದೆ ಎಂದು ನಾನು ಭಾವನೆ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಎಲ್ಲ ವಿಚಾರಗಳನ್ನು ಗಣನೆಗೆ ತೆಗೆದುಕೊಂಡು ಈ ತಿದ್ದುಪಡಿಯನ್ನು ತಂದಿದ್ದೇವೆ. ಇಲ್ಲಿ 'elegible applicants' ಎಂದು ಹೇಳಿದ್ದೇವೆ. ಯಾರಿಗೆ ಈ ಮೊದಲು ಕಾನೂನು ಪ್ರಕಾರ ಅರ್ಜಿ ಹಾಕಿಕೊಳ್ಳಲು ಅಧಿಕಾರವಿತ್ತೋ ಅಂತಹವರಿಗೆ ಮಾತ್ರ ಇದು ಅನ್ವಯವಾಗುತ್ತದೆ. ಪೂರ್ವಾನ್ವಯವಾಗಿ ಇದನ್ನು ಜಾರಿಗೆ ತರುವಂತಹ ಕಾನೂನು ಮಾಡಲು ಈ ಶಾಸನಸಭೆಗೆ ಅಧಿಕಾರವಿದೆ. ಈಗ ಏನೇನು ತೊಂದರೆಗಳಿವೆ ಎಂಬುದನ್ನು ಮಾನ್ಯ ಸದಸ್ಯರು ಹೇಳಿದ್ದಾರೆ. ಅದನ್ನೆಲ್ಲಾ ನಾವು ಗಣನೆಗೆ ತೆಗೆದುಕೊಳ್ಳುತ್ತೇವೆಂದು ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮೊದಲು ಅರ್ಜಿ ಹಾಕಿಕೊಳ್ಳಲು ಕೊಟ್ಟಿದ್ದ ಅವಧಿ ಸಾಲದು, ಮತ್ತೆ ಅವಧಿಯನ್ನು ಹೆಚ್ಚು ಮಾಡಬೇಕೆಂದು ಮನವಿಗಳು ಬಂದಿದ್ದರಿಂದ ನಾವು ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಈ ತಿದ್ದುಪಡಿ ಕಾನೂನಿನಲ್ಲಿ ಯಾವ ಭಾಧಕವೂ ಇಲ್ಲವೆಂಬುದನ್ನು ತಾವು ಸಹ ಒಪ್ಪಿಕೊಳ್ಳುತ್ತೀರಿ.

ಉಪಾಧ್ಯಕ್ಷರು.— ಈ ಕಾನೂನಿನಲ್ಲಿ ಯಾವ ಭಾಧಕವೂ ಇಲ್ಲವೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದರಿಂದ 'eligible applicants' ಏನಿದ್ದಾರೆ, ಅವರಿಗೆ ತೊಂದರೆಯಾಗಬಹುದೆಂದು ಹೇಳುತ್ತಿದ್ದಾರೆ.

Sri A. Lakshmisagar.— Mr Dy. Speaker, regarding eligible applicant's. Mr. Narayanarao has already made it clear.

ಡಾ॥ ಎಚ್. ಎಲ್. ತಿಮ್ಮೇಗೌಡ.— ಮಾನ್ಯ ಅಧ್ಯಕ್ಷರೇ, ತಾ॥ 30–6–1981 ರಂದು ಯಾರು ಯಾರು ಟೆನೆಂಟ್‌ಗಳಾಗಿದ್ದರು ಅವರೆಲ್ಲರೂ eligible applicants ಎಂದು ಮತ್ತು ಇಂತಹವರು ಅರ್ಜಿ ಹಾಕಿಕೊಳ್ಳಲು ಇದರಲ್ಲಿ ಅವಕಾಶ ಮಾಡಿಕೊಡಲಾಗಿದೆ ಎಂದು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಆದರೆ ತಹಶೀಲ್‌ದಾರರು ಏನಾದರು ಇಂತಹ ಜಮೀನನ್ನು ಆ ತಾರೀಖಿನ ನಂತರ ಬೇರೆಯವರಿಗೆ ಹರಾಜು ಮೂಲಕ ಕೊಟ್ಟಿದ್ದರೆ, ಹರಾಜ್ ಮೂಲಕ ಜಮೀನು ಪಡೆದವರೂ ಸಹ ಟೆನೆಂಟ್ಸ್ ಆಗುತ್ತಾರೆ. ಇಂತಹ ಸಂದರ್ಭದಲ್ಲಿ ಹೊಸದಾಗಿ ಟೆನೆಂಟ್ಸ್ ಆದವರಿಗೂ ಮತ್ತು ಈ ಮೊದಲೇ ಟೆನೆಂಟ್ಸ್ ಆದವರಿಗೂ ವ್ಯಾಜ್ಯಗಳು ಬರುವುದಿಲ್ಲವೇ ಮತ್ತು ಗಲಾಟೆಯಾಗುವುದಿಲ್ಲವೇ?

Sri A. Lakshmisagar.— All those details Mr Narayanarao has made clear with reference to the High Court Order, how they have been able to treat such situation. But the more important point is that it is only a matter seeking an extention of time. It is not as if we are not doing it for the first time. Representations are there I would like to make it clear that all the points refered to by the Hon.Members will be kept in mind.

ಉಪಾಧ್ಯಕ್ಷರು.— ಈ ಮೊದಲೇ ಟೆನೆಂಟ್ಸ್ ಆದವರಿಗೆ ಇದರಿಂದ ತೊಂದರೆಯಾಗದಂತೆ ನೋಡಿಕೊಳ್ಳಬೇಕೆಂದು ಮಾನ್ಯ ಸದಸ್ಯರು ಹೇಳಿದ್ದಾರೆ.

Sri A. Lakshmisagar.— I will keep the details in mind while implimenting. But, the intention is to permit the persons to file applications on the date on which they were persons eligible for registration of occupancy rights. This is the point.

ಶ್ರೀ ಕೆ. ಎಚ್. ರಂಗನಾಥ್.— ಸ್ವಾಮಿ, ನಾನು ವ್ಯಕ್ತಪಡಿಸಿದಂಥ ಅನುಮಾನಗಳಿಗೆ ಮಾನ್ಯ ಮಂತ್ರಿಗಳಿಂದ ಉತ್ತರ ಬರಲಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್. — ಸ್ವಾಮಿ, ನಾನು ಪದೇ ಪದೇ ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.— ಹಾಗಿದ್ದರೆ ನೀವು ಇಲ್ಲಿ ಏತಕ್ಕೆ ಇದ್ದೀರಿ? What for are you here? You are here to answer hundreds of times and even thousands of times.

Sri A. Lakshmisagar.— Not for cross-examination.

ಶ್ರೀ ಬಿ. ಎಲ್. ಗೌಡ — ಏನು ನೀವು ಹೆದರಿಸುತ್ತಿದ್ದೀರಾ ?

ಶ್ರೀ ಕೆ. ಎಚ್. ರಂಗನಾಥ್.— ತಾವು ಸ್ವಲ್ಪ ಕಾನೂನು ಓದಿ ನೋಡಿ.

(ಗೊಂದಲ)

Sri K. H. Ranganath.— I am talking to the Hon Speaker. Sir, I am raising a hypothetical propositi n. ಈಗ ಯಾರೋ ಒಬ್ಬರು ಈ ಇನಾಂ ಜಮೀನನ್ನು ಗುತ್ತಿಗೆಗೆ ಪಡೆದು ವ್ಯವಸಾಯ ಮಾಡುತ್ತಾರೆಂದು ಇಟ್ಟುಕೊಳ್ಳೋಣ. ಇವರ ಗುತ್ತಿಗೆ ಅವಧಿ ತಾ॥ 1–7–1981ಕ್ಕೆ ಮುಗಿದ ನಂತರ ಅಲ್ಲಿನ ತಹಶೀಲ್‌ದಾರರು ಬೇರೆ ಒಬ್ಬರು ಟೆನೆಂಟ್‌ಗೆ ಒಂದು ವರ್ಷದ ಗುತ್ತಿಗೆಗೋ ಅಥವಾ 5 ವರ್ಷಗಳ ಗುತ್ತಿಗೆಗೋ ಕೊಟ್ಟಿರಬಹುದು. ಒಂದು ವೇಳೆ ಗುತ್ತಿಗೆಗೆ ಪಡೆಯಲು ಯಾರೂ ಸಹ ಮುಂದೆ ಬರದಿದ್ದರೆ ಅದೇ ಜಮೀನನ್ನು ದರಖಾಸ್ತು ಮೂಲಕ ಮಂಜೂರು ಮಾಡಿದ್ದರೆ ಆಗ ತಾವು ಏನು ಮಾಡುತ್ತೀರಿ ? ಅದಕ್ಕೆ ನಾನು ಹೇಳುವುದೇನೆಂದರೆ, It is deemed to have been extended from that day, ಎಂದು ಇಲ್ಲಿ ಹೇಳಿದರೆ ಒಳ್ಳೆಯದು. 'eligible applicants' ಎಂದು ಹೇಳುತ್ತೀರಿ Who is the eligible applicant ? Is it the tenant or is it the lessee that was holding the land as on 30th June 1981 or the Lessee that holds the land as on to-day from 2nd of July 1981 or is it the grantee that is holding the land from August 1981. These are problems ಆದ್ದರಿಂದ ಈ ಬಗ್ಗೆ ರಾಜ್ಯದ ಎಲ್ಲ ಕಡೆಗಳಿಂದ ಮಾನ್ಯ ಕಂದಾಯ ಮಂತ್ರಿಗಳು ಅಂಕಿಅಂಶಗಳನ್ನು ತರಿಸಿಕೊಂಡು ವಿಚಾರ ಮಾಡಿ ಅನಂತರ ಇದನ್ನು ಮಾಡುವುದು ಒಳ್ಳೆಯದೆಂದು ನಾನು ಹೇಳುತ್ತಿರುವುದು. ನಾವು ಇಲ್ಲಿಗೆ ಏತಕ್ಕೆ ಬಂದಿದ್ದೇವೆ ? ಇದ್ದಂಥ ವಿಚಾರಗಳನ್ನು ಹೇಳುವುದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ. ನಾವು ಹೇಳಿದ ರೀತಿಯಲ್ಲಿ ಸರಿ ಮಾಡುವುದಿದ್ದರೆ ಮಾಡಿ, ಇಲ್ಲದಿದ್ದರೆ ತಮಗೆ ಅಧಿಕಾರವಿದೆ ಈಗಿರುವ

ರೀತಿಯಲ್ಲಿಯೇ ಪಾಸ್ ಮಾಡುತ್ತೇವೆಂದರೆ ಮಾಡಿಕೊಳ್ಳಿ, ಆದರೆ if he wants to raise his voice, I want to raise my voice.

ಶ್ರೀ ಎಂ. ಎಸ್. ನಾರಾಯಣರಾವ್.— 1981 ನೇ ಇಸವಿಯಿಂದೀಚೆಗೆ ತಹಶೀಲ್‌ದಾರರು ಒಂದು ವರ್ಷ ಇಲ್ಲವೇ 3 ವರ್ಷಗಳ ಗುತ್ತಿಗೆ ಆಧಾರದ ಮೇಲೆ ಯಾರಿಗೂ ಜಮೀನನ್ನು ಕೊಡುವುದ ಕ್ಕಾಗುವುದಿಲ್ಲ. ಇದಕ್ಕೂ ಮೊದಲು ಯಾರು ಟೆನೆಂಟ್ಸ್ ಇರುತ್ತಾರೋ ಅವರುಗಳೇ ಮುಂದುವರೆ ದಿರುತ್ತಾರೆ. ಇಂತಹ ಜಮೀನುಗಳನ್ನು ಗುತ್ತಿಗೆ ಆಧಾರದ ಮೇಲೆ ಕೊಡಲು ತಹಶೀಲ್‌ದಾರರಿಗೆ ಇದ್ದಂಥ ಅಧಿಕಾರವನ್ನು ಈಗ ನಿಲ್ಲಿಸಲಾಗಿದೆ. As soon as this Act is came into force giving again for leasing of these properties is prohibited. ಭೂಸುಧಾರಣಾ ಕಾನೂನು ಜಾರಿಗೆ ಬಂದಮೇಲೆ ಯಾರು ಯಾರು ಈ ಜಮೀನುಗಳಲ್ಲಿ ಕೆಲಸ ಮಾಡು ತ್ತಿದ್ದರೋ ಅವರೇ ಈಗಲೂ ಸಹ ಜಮೀನನ್ನು ಪಡೆಯಲು ಅರ್ಹರಾಗಿದ್ದಾರೆ. They will be continued as tenant and they will be entitled himself to get registered as tenant ಆದ್ದರಿಂದ ಮಾನ್ಯ ಸದಸ್ಯರುಗಳು ಈ ಬಗ್ಗೆ ಏನು ಒಂದು ಹೆದರಿಕೆ ವ್ಯಕ್ತ ಪಡಿಸುತ್ತಿದ್ದಾರೆ, ಅದಕ್ಕೆ ಆಧಾರವೇನೂ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ — ಡಾ॥ ತಿಮ್ಮೇಗೌಡರು ಹೇಳಿದಂತೆ ಅನೇಕ ಕಡೆಗಳಲ್ಲಿ ಈ ದೇವಸ್ಥಾನಗಳಿಗೆ ಸಂಬಂಧಪಟ್ಟ ಜಮೀನುಗಳನ್ನು ನೋಡಿಕೊಳ್ಳುತ್ತಿದ್ದ ಗುತ್ತಿಗೆದಾರರನ್ನು ಬದಲಾವಣೆ ಮಾಡಿದ್ದಾರೆ. ನಮ್ಮ ಕುಣಿಗಲ್ ತಾಲ್ಲೂಕಿನಲ್ಲಿಯೂ ಸಹ ಈ ರೀತಿ ಬದಲಾವಣೆ ಮಾಡಿ ದ್ದಾರೆ. ಇಂತಹ ನೂರಾರು ಕೇಸ್‌ಗಳು ನಮ್ಮ ತಾಲ್ಲೂಕಿನಲ್ಲಿವೆ. ಇಂತಹವರು ಏನು ಮಾಡಬೇಕು ? ಈ ಹಿಂದೆ ಟೆನೆಂಟ್ ಆದವರಿಗೆ ಅರ್ಜಿ ಹಾಕಿಕೊಳ್ಳಲು ಸಮಯ ಕೊಟ್ಟಿರುವುದು ಸರಿಯೆ; ಆದರೆ ಇವರ ನಂತರ ಜಮೀನನ್ನು ಸಾಗುವಳಿ ಮಾಡುತ್ತಿರುವ ಟೆನೆಂಟ್ಸ್ ಯಾರು ಯಾರಿದ್ದಾರೆ, ಅವರ ಸಮಸ್ಯೆ ಯನ್ನು ತಾವು ಯಾವ ರೀತಿ ಬಗೆಹರಿಸುತ್ತೀರಿ ? ಇಂತಹವರ ಸಮಸ್ಯೆಯನ್ನು ಬಗೆಹರಿಸುವುದು ಹೇಗೆ ಎಂಬುದನ್ನು ತಾವು ಯೋಚನೆ ಮಾಡಬೇಕು. ಈ ಬಗ್ಗೆ ಕೂಲಂಕಷವಾಗಿ ಯೋಚನೆ ಮಾಡಿದ ನಂತರ ಈ ಕಾನೂನನ್ನು ಜಾರಿಗೆ ತರುವುದು ಒಳ್ಳೆಯದು. ಇದನ್ನು ಅವಸರದಲ್ಲಿ ಜಾರಿಗೆ ತಂದರೆ ಕೆಲವರಿಗೆ ತೊಂದರೆಯಾಗುತ್ತದೆಂದು ನಾವು ಹೇಳುತ್ತಿದ್ದೇವೆ. ಪೂರ್ವಾನ್ವಯವಾಗಿ ಇದನ್ನು ಜಾರಿಗೆ ತರುತ್ತಿರು ವುದು ಸರಿಯಲ್ಲವೆಂದು ನಾವು ಹೇಳುವುದಿಲ್ಲ. ಆದರೆ ಕಳೆದ 3 ವರ್ಷಗಳಿಂದ ಆದಂಥ ಬದಲಾವಣೆ ಗಳಿಗೆ ತಾವು ಪರಿಹಾರ ಯಾವ ರೀತಿ ಹುಡುಕುತ್ತೀರಿ ?

ಶ್ರೀ ಎ. ಲಕ್ಷ್ಮೀಸಾಗರ್ — ಮಾನ್ಯ ಸದಸ್ಯರು ಹೇಳಿದಂಥ ವಿಷಯಗಳನ್ನು ನಾವು ಗಮನ ದಲ್ಲಿಟ್ಟುಕೊಂಡಿದ್ದೇವೆಂಬ ಮಾತನ್ನು ಹೇಳುತ್ತೇನೆ. ಯಾವ ಒಂದು ಉದ್ದೇಶಕ್ಕೋಸ್ಕರ ಈ ಹಿಂದೆ ಅವಧಿಯನ್ನು ವಿಸ್ತರಣೆ ಮಾಡಲಾಗಿತ್ತೋ ಅದೇ ಉದ್ದೇಶವನ್ನು ಇಟ್ಟುಕೊಂಡು ನಾವು ಅವಧಿಯನ್ನು ವಿಸ್ತರಣೆ ಮಾಡಿದ್ದೇವೆ. ಈ ಮೊದಲು ಯಾರ ಸ್ವಾಧೀನದಲ್ಲಿ ಜಮೀನು ಇತ್ತೋ, ಅಂತಹವರ ಸಹಾಯಕ್ಕಾಗಿ ಇದನ್ನು ತಂದಿದ್ದೇವೆ. ಆದ್ದರಿಂದ ಇದಕ್ಕೆ ಈ ಮಾನ್ಯ ಸಭೆಯು ಅನುಮತಿ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಡಾ॥ ಎಚ್. ಎಲ್. ತಿಮ್ಮೇಗೌಡ — ತಾ॥ 30-6-1981 ರಲ್ಲಿ ಯಾರು ಯಾರು ಟೆನೆಂಟ್ಸ್ ಆಗಿದ್ದರು, ಅಂತಹವರಿಗೆ ತೊಂದರೆಯಾಗಬಾರದೆಂಬುದು ತಮ್ಮ ಉದ್ದೇಶವಾಗಿದ್ದರೆ,

'provided if any grant has been done after that date, it stands cancelled' ಎಂದು ಇದರಲ್ಲಿ ಏತಕ್ಕೆ ಸೇರಿಸಬಾರದು ?

Sri A Lakshmisagar.—That point has already been answered.

ಡಾ॥ ಎಚ್. ಎಲ್. ತಿಮ್ಮೇಗೌಡ.— ಈಗ ತಾವು ತಾ॥ 30-6-1981 ರಲ್ಲಿ ಯಾರು ಯಾರು ಟೆನೆಂಟ್ಸ್ ಆಗಿದ್ದರು, ಅವರೇ 'eligible applicants' ಎಂದು ಪರಿಗಣಿಸಿ ಅರ್ಜಿ ಹಾಕಿ ಕೊಳ್ಳಲು ಸಮಯವನ್ನು ವಿಸ್ತರಣೆ ಮಾಡುತ್ತಿದ್ದೀರಿ. ಆದರೆ ನನಗೆ ಗೊತ್ತಿರುವ ಪ್ರಕಾರ ಆ ತಾರೀಖಿನಿಂದೀಚೆಗೆ ಕೆಲವು ಕಡೆಗಳಲ್ಲಿ ತಹಶೀಲ್‌ದಾರರು ಇಂತಹ ಜಮೀನುಗಳನ್ನು ಒಂದು ವರ್ಷ ಇಲ್ಲವೇ ಎರಡು ವರ್ಷಗಳ ಅವಧಿಗೆ ಗುತ್ತಿಗೆಗೆ ಕೊಟ್ಟಿದ್ದರೆ ಇಲ್ಲವೇ ದರಖಾಸ್ತು ಮೂಲಕ ಕೊಟ್ಟಿದ್ದರೆ ಇಲ್ಲವೇ ಹರಾಜು ಮೂಲಕ ಗೇಣಿಗೆ ಕೊಟ್ಟಿದ್ದರೆ ಏನು ಮಾಡುವುದು ? ಆದ್ದರಿಂದ ಇಂಥಾ ದ್ದನ್ನೆಲ್ಲಾ ರದ್ದುಗೊಳಿಸಿದಾಗ ಮಾತ್ರ ಈಗ ತಂದಿರುವ ತಿದ್ದುಪಡಿ ಮಸೂದೆ ಊರ್ಜಿತವಾಗು ತ್ತದೆ. ಈ ಕಾರಣದಿಂದ ಈ ತಿದ್ದುಪಡಿ ಮಸೂದೆಯಲ್ಲಿ 'Provided if any grant has been done after that date, it stands cancelled' ಎಂದು ಸೇರಿಸಿದರೆ ಒಳ್ಳೆಯ ದೆಂದು ಸಲಹೆ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀ ಸಾಗರ್.—ಸ್ವಾಮಿ ಹಿಂದೆ ಯಾರ ವಶದಲ್ಲಿ ಲ್ಯಾಂಡ್ಸ್ ಇತ್ತೋ ಅವರಿಗೆ ಕಾನೂನು ಪ್ರಕಾರ ಅವರ ಕೈಯಲ್ಲಿ ಇದೆ. ಆ ಬಗ್ಗೆ ನಾನು ಈಗಾಗಲೇ ಮಾನ್ಯ ಸದಸ್ಯರಿಗೆ ಉತ್ತರ

ಕೊಟ್ಟಿದ್ದೇನೆ. ಯಾರ ವಶದಲ್ಲಿ ಜಮೀನು ಇದೆಯೋ ಅವರ ಪೊಜಿಷನ್‌ನಲ್ಲಿ ಜಮೀನು ಇದೆ. ನಾವು ಯಾವುದನ್ನೂ ಸಹ ಡಿಸ್‌ಟರ್ಬ್ ಮಾಡಿಲ್ಲ.

ಉಪಾಧ್ಯಕ್ಷರು.—ಮಾನ್ಯ ಸದಸ್ಯರು ಕೇಳುತ್ತಿರುವುದು ಏನೆಂದರೆ ಈಗ ಯಾವುದೂ ಲ್ಯಾಂಡ್ ಗ್ರಾಂಟ್ ಆಗಿಲ್ಲವೇ ಎಂದು. The lands were not disposed off. So no land has been granted, he says.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ಆ ಆಕ್ಟ್‌ನಲ್ಲಿ ಏನಿದೆ ಎಂಬುದನ್ನು ನೋಡಿ. The plain reading of the Act will not show that. I request through you the hon. Deputy Speaker, let not the hon. Minister for L w Make some observations If he wants that I should n t be in his House and if my presence here is inconvenient, I would rather prefer to be out. With a very heavy heart I am saying this.

Sri B. L Gowda —Mr. Deputy Speaker, Sir.....

Sri. K. H. Ranganath —I am not speaking to the Hon. Minster for Agriculture. I am speaking to the Speaker. Don't talk like a small boy or urchin.

Sri B. L. Gowda.—I only said I want his advice.

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ ನಾನು ಅಗ್ರಿಕಲ್ಚರ್ ಮಿನಿಸ್ಟ್ರ್‌ಗೆ ಹೇಳಲಿಲ್ಲ. ನಾನು ಹೇಳಿದ್ದು ಕಾನೂನು ಮಂತ್ರಿಗಳಿಗೆ. ಆದರೆ ಮಾನ್ಯ ಕೃಷಿ ಮಂತ್ರಿಗಳು ಆ ರೀತಿ ಮಾತನಾಡುವುದು ಸರಿಯಲ್ಲ. Don't talk like that.

ಶ್ರೀ ಬಿ. ಎಲ್. ಗೌಡ.—ನಾನು ಹೇಳಿದ್ದು ನಿಮ್ಮ ಸಲಹೆ ನನಗೆ ಅಗತ್ಯವಾಗಿ ಬೇಕು ಎಂದು. ನೀವು ಮಾತನಾಡಬಾರದೆಂದು ನಾನು ಹೇಳಲಿಲ್ಲ.

ಶ್ರೀ ಆರ್. ಎಲ್. ಜಾಲಪ್ಪ —ಮಾನ್ಯ ಮಂತ್ರಿಗಳು ಆ ತರಹ ಹೇಳಲಿಲ್ಲ.

Sri K. H. Ranganath.—I understand him. Do you think I dont understand him ? ಸ್ವಾಮಿ ನಾವು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಲ್ಲಿಗೆ ಬಂದಿದ್ದೇವೆ. ಆದರೆ ನಾವು ಕೋರ್ಟ್‌ನಲ್ಲಿ ಕಕ್ಷಿದಾರರ ಪರವಾಗಿ ವಾದ ಮಾಡುವುದಕ್ಕೆ ಬಂದಿಲ್ಲ. ಕಾನೂನು ಮಾಡುವಾಗ ಆ ಕಾನೂನಿನಲ್ಲಿ ಏನಾದರೂ ಲೋಪದೋಷಗಳು ಇದ್ದರೆ ಅದನ್ನು ಸರಿಪಡಿಸಿ ಎಂದು ಹೇಳುವ ಅಧಿಕಾರ ನಮಗೆ ಇದೆ. ಆ ರೀತಿಯ ಒಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಕ್ಕೆ ನಾವು ಈ ಸಭೆಗೆ ಬಂದಿದ್ದೇವೆ. ಯಾವುದೇ ಕಾನೂನು ತಿದ್ದುಪಡಿ ಮಾಡುವುದಕ್ಕೆ ಈ ಸದನಕ್ಕೆ ಅಧಿಕಾರ ಇದೆ. ಆದರೆ ಈ ಸದನದಲ್ಲಿ ಯಾರೂ ಅದನ್ನು ಪ್ರೆಸ್ಟೀಜ್ ಮಾಡಿಕೊಂಡು ಮಾತನಾಡುವುದಕ್ಕೆ ಬರುವುದಿಲ್ಲ. ಅದನ್ನು ಮಾನ್ಯ ಮಂತ್ರಿಗಳು ಅರ್ಥಮಾಡಿಕೊಳ್ಳಬೇಕು. I think the Hon. Minister for Law has got some per-conceived nations about me ಅಂಥ ನನಗೆ ಕಾಣಿಸುತ್ತದೆ. ಆದರೆ ನಾನು ಈ ಸಭೆಯಲ್ಲಿ ಏನೂ ಮಾತನಾಡಬಾರದೆಂದು ಹೇಳಿದರೆ ನಾನು ಮಾತನಾಡುವುದಿಲ್ಲ. I would just write and send my amendment and be done away with that. ಅವರಿಗೆ ನಾವು ಕೊಡುವ ಕೆಲವು ಸಲಹೆಯಿಂದ ಉಪಯೋಗವಾಗ ಬಹುದು ಎಂದು ತಿಳಿದುಕೊಂಡು ನನ್ನಲ್ಲಿ ಇದ್ದಂಥ ಕೆಲವಾರು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಅದು ಬಿಟ್ಟು ಬೇರೆನೂ ಅಲ್ಲ. This Bill should have been piloted by the Hon. Revenue Minister and he should have answered. ನಮಗೆ ವಿಷಯದ ಬಗ್ಗೆ ಏನಾದರೂ ಸಂಶಯ ಬಂದು ಉತ್ತರ ಬೇಕೆಂದು ಕೇಳಿದಾಗ ಮಾನ್ಯ ಮಂತ್ರಿಗಳು ಹತ್ತು ಸಾರಿ ಅಲ್ಲ ಒಂದು ನೂರು ಸಾರಿ ಕೇಳಿದರೂ ಉತ್ತರ ಹೇಳುವುದಕ್ಕೆ ತಯಾರಾಗಿರಬೇಕು. ನಾವು ಪ್ರಶ್ನೆಯನ್ನು ಕೇಳುವುದು ನಮ್ಮ ಹಕ್ಕು. ಅವರು ಉತ್ತರ ಹೇಳತಕ್ಕಂಥದ್ದು ಅವರ ಕರ್ತವ್ಯ ಕೂಡ ಆಗಿರುತ್ತದೆ. ಸರ್ಕಾರದಿಂದ ಮಾನ್ಯ ಮಂತ್ರಿಗಳಿಗೆ ಸಂಬಳ ಕೊಡುತ್ತಾರೆ. ಆದರೆ ಆ ಹಣವನ್ನು ಬೇರೆ ಬಾಬತ್ತಿಗೆ ಖರ್ಚು ಮಾಡುವುದಕ್ಕೆ ಬರುವುದಿಲ್ಲ. ನಾವು ಕೂಡ ಆಫೀಸ್ ಈ ಮನೆಯಲ್ಲಿ ವ್ಯಾಜ್ಯ ಮಾಡುವುದಕ್ಕೆ ಬಂದಿಲ್ಲ. ಕಾನೂನು ಪ್ರಕಾರ ಏನು ಇದೆ ಅದನ್ನು ಹೇಳಿದರೆ ಪರವಾಗಿಲ್ಲ. ಅದು ಬಿಟ್ಟು ನೀವು ಅಧ್ಯಕ್ಷರಾಗಿದ್ದೀರಿ ಎಂದು ಪದೇ ಪದೇ ವ್ಯಂಗ್ಯವಾಗಿ ಮಾತನಾಡುವುದು ಸರಿಯಲ್ಲ. ಯಾರು ಬೇಕಾದರೂ ಅಧ್ಯಕ್ಷರಾಗುವುದಕ್ಕೆ ಸಾಧ್ಯವಿದೆ. ರಾಜ್ಯಾಂಗದ ಪ್ರಕಾರ ಯಾರಿಗೆ 25 ವಯಸ್ಸಾಗಿರುತ್ತದೆಯೋ ಅವರು ಅಧ್ಯಕ್ಷರಾಗಬಹುದು. ಅಧ್ಯಕ್ಷರಾಗುವುದಕ್ಕೆ ಓದು ಮತ್ತು ಬರಹ ಬರಲೇ ಬೇಕು ಎಂದು ಎಲ್ಲಿಯೂ ಹೇಳಿಲ್ಲ. ಒಬ್ಬ ದಡ್ಡನಾಗಿದ್ದವನು. ಕೂಡ ಅಧ್ಯಕ್ಷನಾಗಬಹುದು. ಆದರೆ ನಾನು ಅಧ್ಯಕ್ಷನಾಗಿದ್ದಾಗ ದಡ್ಡನಾಗಿದ್ದೆ ಎನ್ನುವ

ಅರ್ಥ ಬರುತ್ತದೆ. ಆದ್ದರಿಂದ ತಾವು ಆ ತರಹ ವ್ಯಂಗ್ಯವಾಗಿ ಮಾತನಾಡುವುದು ಸರಿಯಲ್ಲ. ನಾನೂ ಕೂಡ ಬಹಳ ತಾಳ್ಮೆಯಿಂದ ಕೇಳುತ್ತಾ ಇದ್ದೇನೆ. ನನಗೂ ಕೂಡ ಆ ರೀತಿ ವ್ಯಂಗವಾಗಿ ಮಾತನಾಡುವುದು ಬರುತ್ತದೆ. ಆದರೆ ನಾನು ಆ ರೀತಿ ಸಣ್ಣತನದಿಂದ ಮಾತನಾಡಬಾರದೆಂದು ಸುಮ್ಮನಿದ್ದೆ. ಆ ಪದಗಳನ್ನು ಬಳಸಿ ಮಾತನಾಡಿ ಎಂದು ಹೇಳಿದರೆ ನಾನೂ ಕೂಡ ಮಾತನಾಡುತ್ತೇನೆ. Let this be the first and the last occasion for such things. ಮಾನ್ಯ ಸದಸ್ಯರು ಒಂದು ನೂರು ಸಾರಿ ಕೇಳಿದರೂ ಉತ್ತರ ಹೇಳುವ ಸಂಯಮವನ್ನು ಮಾನ್ಯ ಮಂತ್ರಿಗಳು ತೆಗೆದುಕೊಳ್ಳಬೇಕು. ಒಂದು ವೇಳೆ ನಾನು ಮಾತನಾಡುವುದು ಮಾನ್ಯ ಮಂತ್ರಿಗಳಿಗೆ ಏನಾದರೂ ತೊಂದರೆಯಾಗುವುದಾದರೆ ನಾನು ಮಾತನಾಡುವುದಿಲ್ಲ. ನಾನು ಸುಮಾರು ಎರಡು ಮೂರು ಸಾರಿ ನೀಡಿದ್ದೇನೆ. ಮಾನ್ಯ ಮಂತ್ರಿಗಳು ಇದೇ ರೀತಿಯಲ್ಲಿ ಮಾತನಾಡಿದ್ದಾರೆ

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಹೇಳಿದ್ದು ಏನೆಂದರೆ ತಾವೂ ಕೂಡ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ ಎಂದು.

Mr. Deputy Speaker:— " This unnecessarily creates disputes between a person-in whose favour a land has been granted if any after 31st of june".

Sri A. Lakshmisagar:. No lands have been taken away from the holders of these lands and distributed to others. ಸ್ವಾಮಿ ನಾನು ಈ ಮಾತನ್ನು ಈಗಾಗಲೇ ಮಾನ್ಯ ಸದಸ್ಯರಿಗೆ ತಿಳಿಸಿದ್ದೇನೆ. ನಾವು ಇದರಬಗ್ಗೆ ಇನ್ನು ಹೆಚ್ಚಿಗೆ ಹೇಳುವುದಕ್ಕೆ ಯಾವುದೇ ವಾದವಿಲ್ಲ ಮತ್ತೆ ಮಾನ್ಯ ಸದಸ್ಯರಾದಂಥ ಶ್ರೀಮಾನ್ ರಂಗನಾಥ್‌ರವರ ಮೇಲೆ ನನಗೆ ಪೂರ್ವಾನ್ವಯ ಪೀಡಿತ ಗ್ರಹ ಏನೂ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ಈ ಸದನದಲ್ಲಿ Records should be straightened. ಆದರೆ ಯಾವ ತರಹ ಲ್ಯಾಪ್ಸ್ ಆಗುತ್ತದೆ ಎನ್ನುವುದನ್ನೂ ಕೂಡ ತಾವು ಯೋಚನೆ ಮಾಡಬೇಕು. ಕಾನೂನು ಬಂದ ನಂತರ ಯಾವ ತರಹ ಆಗುತ್ತದೆ, ಆದರಿಂದ ಏನು ಪರಿಣಾಮ ಬೀರುತ್ತದೆ ಎನ್ನುವುದನ್ನು ಕೂಡ ನಾವು ನೋಡಬೇಕಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಮಾತನಾಡಿದ್ದರಲ್ಲಿ ಮಾನ್ಯ ಸದಸ್ಯರಿಗೆ ವ್ಯಂಗ್ಯವಾಗಿ ಕಾಣಿಸಿದರೆ ನಾನು ಏನು ಮಾಡಲಿ ?

ಶ್ರೀ ಕೆ. ಎಚ್. ರಂಗನಾಥ್.—ಸ್ವಾಮಿ, ಇವತ್ತು ಈ ಕಾನೂನು ಬಂದರೆ ಟೈಮ್ ಎಕ್ಸ್‌ಪೈರ್ ಆಗಿರುವವರ ಗತಿ ಏನು ?

ಶ್ರೀ ಕೆ. ಚನ್ನಬಸವನಗೌಡ.—ಸ್ವಾಮಿ, ನಮ್ಮ ಬಳ್ಳಾರಿ ಜಿಲ್ಲೆಯವರು ಕೂಡ ಒಂದೇ ಒಂದು ಫಾರಂನ್ನು ಉಪಯೋಗ ಮಾಡಬಹುದೇ, ಇಲ್ಲವೇ ಎಂಬುದನ್ನು ತಿಳಿಸಬೇಕು. ಮತ್ತೆ ಮಾನ್ಯ ಮಂತ್ರಿಗಳು ಈ ಕಾನೂನನ್ನು ತಂದಿರುವುದಕ್ಕೆ ನಾನು ಸ್ವಾಗತ ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಕಾನೂನು ಪ್ರಕಾರ ಎಲ್ಲರೂ ಒಂದೇ ಫಾರಂ ಫಿಲಪ್ ಮಾಡಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಗೇಣಿದಾರರಿಗೆ ಉಪಯೋಗ ಮಾಡಿಕೊಡುವುದಾದರೆ ಕಾನೂನಿನಲ್ಲಿ ಸ್ಪಷ್ಟವಾಗಿ ಆಳವಡಿಸಬೇಕು.

ಶ್ರೀ ಲಕ್ಷ್ಮೀಸಾಗರ್.— ಸ್ವಾಮಿ, ನಾನು ಈಗಾಗಲೇ ಎಲ್ಲಾ ವಿಷಯಗಳಿಗೂ ಕೂಡ ಸಂಬಂಧಪಟ್ಟ ಹಾಗೆ ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ 30ನೇ ಜೂನ್ 1981ಕ್ಕೆ ಪಂಚಸಾಲನಾಮ ಮತ್ತು 1—7—81ಕ್ಕೆ ಏಕಸಾಲನಾಮ ಇರುವಂತೆ ತಾವು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

Mr. Duputy Speaker:—As there are no amendments, I put clauses 2 to 5 (both inclusive) to the vote of the House. The question is.

"That clauses 2to 5 (both enclusive) do stand part of the bill."

The motion was adopted.

Clauses 2 to 5 (both inclusive) were added to the bill.

CLAUSE 1 ETC

Mr. Deputy Speaker.— The question is : " That Clause 1,

the Long Title, the Premable and the Enacting Formula do stand part of the Bill ".

The motion was adopted

Clause 1, the Long Title, the Preamble and the Enacting Formula were added to the Bill

MOTION TO PASS

Sri A. Lakshmisagar (Minister for Law and Parlimentary Affairs, on behalf of Sri V. L Patil, Minister of Revenue) — I beg to move : " The Karnataka Inams Abolition Laws (Amendment) Bill, 1984 be passed "-

Mr. Deputy Speaker — The question is : " That the Karnataka Inams Abolition Laws (Amendment) Bill, 1984 be passed "-

The motion was adopted and the bill was passed

— — —

The Karnataka State Universities (Amendment) Bill, 1984

Motion to consider

Sri B. Rachaiah (Minister for Education)— I move : "That the Karnataka State Universities (Amendment) Bill, 1984 be taken into consideration ".

The question was proposed

ಉಪಾಧ್ಯಕ್ಷರು. — ಮಾನ್ಯ ಸಚಿವರು ವಿಧೇಯಕದ ಬಗ್ಗೆ ವಿವರಣೆ ಕೊಡಿ.

ಶ್ರೀ ಬಿ. ರಾಚಯ್ಯ.— ಮಾನ್ಯ ಉಪಾಧ್ಯಕ್ಷರೆ. ಈ ವಿಧೇಯಕದಲ್ಲಿ ಮೂರು ತಿದ್ದುಪಡಿಗಳನ್ನು ತಂದಿದ್ದೇವೆ. ಮೊದಲನೆಯದಾಗಿ ವಿಶ್ವವಿದ್ಯಾನಿಲಯದ ಸೆನೆಟ್ ಸಿಂಡಿಕೇಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಮೀಟಿಂಗ್ ನಡೆಯತಕ್ಕ ಸಂದರ್ಭದಲ್ಲಿ ಯಾರಾದರೂ ನ್ಯಾಯಾಲಯಕ್ಕೆ ಹೋಗುವ ಅವಕಾಶವಿದೆ. ನ್ಯಾಯಾಲಯದಿಂದ ತಡೆಯಾಜ್ಞೆ ಬಂದರೆ ಮೀಟಿಂಗ್ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನ್ಯಾಯಾಲಯದಿಂದ ತಡೆಯಾಜ್ಞೆ ಬಂದರೂ ಸಭೆಯಲ್ಲಿ ಮುಕ್ಕಾಲು ಭಾಗ ಸದಸ್ಯರು ಇದ್ದರೆ ಮೀಟಿಂಗ್ ಮಾಡುವುದಕ್ಕೆ ಅನುಕೂಲವಾಗುವಂತೆ ಸೆನೆಟ್ ಎಂದು ಹೇಳಿರುವುದನ್ನು ಒಂದು ತಿದ್ದುಪಡಿ. ಎರಡನೆಯ ತಿದ್ದುಪಡಿ ಯೂನಿವರ್ಸಿಟಿ ಗ್ರಾಂಟ್ ಕಮೀಷನ್ ಆರ್ಟಿಕಲ್ 12ರ ಪ್ರಕಾರ, ನಮಗೆ ಗ್ರಾಂಟ್ ಕೊಡಬೇಕಾದ ಪಕ್ಷದಲ್ಲಿ ನಾವು ರೆಕಗ್ನೈಸ್ ಮಾಡಬೇಕಾಗುತ್ತದೆ. ರೆಕಗ್ನೈಸ್ ಮಾಡಬೇಕಾದರೆ ಯೂನಿವರ್ಸಿಟಿಯಲ್ಲಿ ಒಂದು ಪ್ಲಾನಿಂಗ್ ಬೋರ್ಡ್ ಮಾಡಬೇಕೆಂದು ಅವರು ಹೇಳಿದ್ದಾರೆ, ಯೂನಿವರ್ಸಿಟಿ ಪ್ಲಾನಿಂಗ್ ಬೋರ್ಡ್ ಮಾಡಿದರೆ ಯೂನಿವರ್ಸಿಟಿ ಅಕಾಡೆಮಿಕ್ ಕೌನ್ಸಿಲ್, ಸೆನೆಟ್ ಮತ್ತು ಸಿಂಡಿಕೇಟ್‌ಗೆ ರೆಕಗ್ನೈಸ್ ಪಡೆಯುವುದಕ್ಕೋಸ್ಕರ ಅವರು ಏನೊಂದು ಸೂಚನೆ ಕೊಟ್ಟಿದ್ದಾರೆ. ಅದರ ಪ್ರಕಾರ 'ಯೂನಿವರ್ಸಿಟಿ ಪ್ಲಾನಿಂಗ್ ಬೋರ್ಡ್' ಮಾಡುತ್ತೇವೆ. ಅದಕ್ಕೋಸ್ಕರ ತಿದ್ದುಪಡಿ ತಂದಿದ್ದೇವೆ. ಮೂರನೆಯದಾಗಿ ಕೆಲವು ವಿಶ್ವವಿದ್ಯಾನಿಲಯಗಳ ಹಿಡಿತದಲ್ಲಿರತಕ್ಕ ಕಾಲೇಜುಗಳವರು ಅಲ್ಲಿ ಅಕಾಡೆಮಿಕ್ ಹೆಚ್ಚಿಸಿಕೊಳ್ಳುವುದಕ್ಕೋಸ್ಕರ ಅವರ ಪರೀಕ್ಷೆಗಳನ್ನು ಸ್ವತಂತ್ರವಾಗಿ ಮಾಡಿಕೊಳ್ಳುವುದಕ್ಕೆ ಕೇಳಿದ್ದಾರೆ. ಯೂನಿವರ್ಸಿಟಿ ಗ್ರಾಂಟ್ ಕಮೀಷನ್‌ರವರು ಮಂಗಳೂರು ಮತ್ತು ಗುಲ್ಬರ್ಗ ಯೂನಿವರ್ಸಿಟಿಗಳಿಗೆ ಗ್ರಾಂಟ್-ಇನ್-ಏಡ್ ರೆಕಗ್ನೈಸ್ ಕೊಡದೆ ಇರುವುದರಿಂದ, ಎರಡೂ ಯೂನಿವರ್ಸಿಟಿಗಳನ್ನು ಕಂಟಿನ್ಯೂ ಮಾಡುತ್ತೇವೆಂದು ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ರಾಜ್ಯಪಾಲರ ಜೊತೆಯಲ್ಲಿ ಚರ್ಚೆ ಮಾಡಿ ಈ ರೀತಿ ಮಾಡಿದ್ದೇವೆಂದು ಹೇಳಿದ ಮೇಲೆ ಯು. ಜಿ. ಸಿ. ಯವರು ಒಪ್ಪಿಕೊಂಡಿದ್ದಾರೆ. ಈ ರೀತಿ ಮಾಡಿದರೆ ಯು. ಜಿ. ಸಿ. ಯಿಂದ ನಮಗೆ ಅನುಕೂಲಗಳು ಸಿಗುತ್ತವೆ.

ಶ್ರೀ ಕೆ.ಹೆಚ್. ರಂಗನಾಥ್ (ಹಿರಿಯೂರು).—ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿದ್ಯಾಮಂತ್ರಿಗಳು ತಿದ್ದುಪಡಿ ತಂದಿರುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಎರಡು ಕ್ಲಾಸ್‌ಗೆ ಹೊಸ ವಿಧಿನಿಯಮಗಳ ಪ್ರಕಾರ ಸೆಕ್ಷನ್ 56(ಎ) ಮತ್ತು 61(ಎ) ಮತ್ತು ಸೆಕ್ಷನ್ 33ರಲ್ಲಿ ಕ್ಲಾಸ್-(2) ಸಬ್ ಕ್ಲಾಸ್-3ನಲ್ಲಿ